2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.96/2023

ದೋ.ಸಾ. 6
ಫ್ರಾ.ಸಾ. 3
ಪ್ರ.ವ.ಬೊ.ದಿನಾಂಕ. 30-12-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ನದೀಂ |
| ತಂದೆ / ಗಂಡನ ಹೆಸರು | - | ಜಾಕೀರ್ ಹುಸೇನ್ |
| ವಯಸ್ಸು | - | 28 |
| ಉದ್ಯೋಗ | - | ಕೆಇಬಿಯಲ್ಲಿ ಗುತ್ತಿಗೆದಾರ |
| ವಾಸ ಸ್ಥಳ | - | ಮಲೆಬೆನ್ನೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾ.ಸಾ.7 ಹಾಗೂ ಫ್ರಾ.ಸಾ.1 ರವರ ಪರಿಚಯ ಇರುತ್ತದೆ. ದಿಃ 13-07-2021 ರಂದು ನನಗೆ ಪೋಲೀಸರು ಮಲೆಬೆನ್ನೂರು ಪೊಲೀಸ್ ಠಾಣೆಗೆ ಕರೆಯಿಸಿದ್ದರು. ಅಲ್ಲಿ ಫ್ರಾ.ಸಾ.1 ರವರು ಇದ್ದು, ಅವರು ಮು.ಮಾ.5 ಮತ್ತು 7 ನ್ನು ಪೋಲೀಸರಿಗೆ ನೀಡಿದ್ದು, ನಂತರ ಪೋಲೀಸರು ಅವುಗಳನ್ನು ಬಟ್ಟೆಯ ಚೀಲದಲ್ಲಿ ಇಟ್ಟು ವಶಕ್ಕೆ ಪಡೆದಿದ್ದು, ಸದರಿ ಬಟ್ಟೆಗಳಿಗೆ ರಕ್ತ ತಾಗಿತ್ತು. ನಂತರ ಪೋಲೀಸರು ದಾಖಲೆ ಬರೆದು ಪೋಟೋ ತೆಗೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಗುರುತಿಸಿದ ನೋಟೀಸನ್ನು ನಿ.ಪಿ.7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಅಲ್ಲದೇ ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ನಿ.ಪಿ.3 ರಲ್ಲಿ ತನ್ನನ್ನು ಗುರುತಿಸಿರುತ್ತಾರೆ. ಅಲ್ಲದೇ ಸಾಕ್ಷಿಯು ಮು.ಮಾ.5 ಮತ್ತು 7 ನ್ನು ಗುರುತಿಸಿದ್ದು, ಅವುಗಳಿಗೆ ರಕ್ತ ತಾಗಿದೆ ಎಂದು ನುಡಿದಿರುತ್ತಾರೆ. ಅಲ್ಲದೇ ಮು.ಮಾ.6 ಮತ್ತು 8 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.6(ಎ) ಮತ್ತು 8(ಎ) ಎಂದು ಗುರುತಿಸಲಾಯಿತು. ಈ ಕುರಿತು ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನನಗೆ ಫ್ರಾ.ಸಾ.1 ರವರು ಕಳೆದ ನಾಲ್ಕು ಐದು ವರ್ಷಗಳಿಂದ ಪರಿಚಯ ಇರುತ್ತಾರೆ. ಈ ದಿನ ಫ್ರಾ.ಸಾ.1 ನ್ಯಾಯಾಲಯಕ್ಕೆ ಬಂದಿದ್ದಾರೋ ಇಲ್ಲವೋ ನನಗೆ ತಿಳಿದಿರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಫ್ರಾ.ಸಾ.2 ರವರ ಜೊತೆ ಬಂದಿರುತ್ತೇನೆ. ಈ ದಿನ ಫ್ರಾ.ಸಾ.1 ರವರು ಕೂಡ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಫ್ರಾ.ಸಾ.1 ರವರು ನನಗೂ ಹಾಗೂ ಫ್ರಾ,ಸಾ.2 ರವರಿಗೆ ಸಾಕಷ್ಟು ಹಣದ ಸಹಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆತ ಬಡ್ಡಿ ವ್ಯವಹಾರ ಮಾಡುತ್ತಿದ್ದು, ಆತನನ್ನು ಪೋಲೀಸರು ಠಾಣೆಗೆ ಕರೆಯಿಸಿ ಬಡ್ಡಿ ವ್ಯವಹಾರ ನಡೆಸದಂತೆ ಬುದ್ದಿವಾದ ಹೇಳಿದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ಸದರಿ ದಿನ ಪೋಲೀಸರು ಠಾಣೆಗೆ ಕರೆಯಿಸುವ ಪೂರ್ವದಲ್ಲಿ ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಠಾಣೆಗೆ ಬರಲು ಒಂದು ದಿನದ ಮೊದಲು ಪೋಲೀಸರು ತಿಳಿಸಿರುತ್ತಾರೆ. ಆದರೆ ನನಗೆ ಲಿಖಿತವಾಗಿ ನೋಟೀಸನ್ನು ನೀಡಿದ್ದು ಇರುವುದಿಲ್ಲ. ಅದೇ ರೀತಿ ಯಾವ ಪೋಲೀಸರು ಕರೆದಿದ್ದರು ಎಂದು ನನಗೆ ಹೇಳಲು ಸಾಧ್ಯವಿರುವುದಿಲ್ಲ. ನಾನು ಠಾಣೆಗೆ ಹೋದಾಗ ಅಲ್ಲಿ ಯಾರು ಯಾರು ಇದ್ದರು ಎಂದು ನನಗೆ ಹೇಳಲು ಸಾಧ್ಯವಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಸದರಿ ದಿನ ಬರೆದ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಜಗಳದ ಕುರಿತು ಬರೆಯಲಾಗಿರುತ್ತದೆ. ಅದನ್ನು ಬಿಟ್ಟು ಬೇರೆ ಏನನ್ನು ಬರೆದಿರುವುದಿಲ್ಲ.

ಸದರಿ ದಿನ ಮು.ಮಾ.5 ಮತ್ತು 7 ನ್ನು ಪೋಲೀಸರು ನನ್ನ ಕೈಯಲ್ಲಿ ಕೊಟ್ಟು ಫೋಟೋ ತೆಗೆದಿರುತ್ತಾರೆ. ಸದರಿ ಪೋಲೀಸರ ಹೆಸರು ನನಗೆ ಹೇಳಲು ಸಾಧ್ಯವಿರುವುದಿಲ್ಲ. ಆ ದಿನ ನನ್ನನ್ನು ಹೊರತುಪಡಿಸಿ ಬೇರೆಯವರು ದಾಖಲೆಗೆ ಸಹಿ ಮಾಡಿರುವುದಿಲ್ಲ. ನಾನು ಆ ದಿನ ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದು ಇರುವುದಿಲ್ಲ. ಸದರಿ ದಿನ ನಾನು ಠಾಣೆಗೆ ಹೋಗಿದ್ದು, ಅಲ್ಲಿ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಪೋಲೀಸರು ಫ್ರಾ.ಸಾ.1 ರವರು ನೀಡಿದ ಬಟ್ಟೆ ಪಡೆದುಕೊಂಡರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಯಾವುದೇ ಪಂಚನಾಮೆ ಮಾಡಲಾಗಿಲ್ಲ, ಫ್ರಾ.ಸಾ.1 ನನಗೆ ಹಣದ ಸಹಾಯ ಮಾಡುತ್ತಿದ್ದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ಫ್ರಾ.ಸಾ.1 ರವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು, ಆತನು ಹೇಳಿಕೊಟ್ಟ ಪ್ರಕಾರ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.12.31 16:48:28 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.96/2023

ದೋ.ಸಾ. 4

ಫ್ರಾ.ಸಾ. 2

ಪ್ರ.ವ.ಬೊ.ದಿನಾಂಕ. 30-12-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಮುಬಾರಕ್ |
| ತಂದೆ / ಗಂಡನ ಹೆಸರು | - | ಅನ್ವರ್ ಭಾಷಾ |
| ವಯಸ್ಸು | - | 29 |
| ಉದ್ಯೋಗ | - | ಚಿಕನ್ ಅಂಗಡಿ |
| ವಾಸ ಸ್ಥಳ | - | ಮಲೆಬೆನ್ನೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾ.ಸಾ.5 ರವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿ ನನಗೆ ಹಾಗೂ ಚಾ.ಸಾ.5 ರವರಿಗೆ ಪೋಲೀಸರು ಒಂದು ನೋಟೀಸನ್ನು ನೀಡಿ ದಿಃ 13-07-2021 ರಂದು ಠಾಣೆಗೆ ಕರೆಯಿಸಿದ್ದರು. ಸಾಕ್ಷಿಯು ಸದರಿ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ನಾವು ಠಾಣೆಗೆ ಹೋದಾಗ ಅಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಇದ್ದರು. ನಂತರ ಆರೋಪಿತರು ನಮ್ಮನ್ನು ಠಾಣೆಯಿಂದ ಗಲಾಟೆ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಸ್ಥಳವನ್ನು ತೋರಿಸಿಕೊಟ್ಟಿದ್ದು, ಅಲ್ಲದೇ ಸ್ಥಳದಲ್ಲಿ ಒಂದು ಕಟ್ಟಿಗೆಯನ್ನು ಹಾಗೂ ಕಬ್ಬಿಣದ ರಾಡನ್ನು ತೋರಿಸಿಕೊಟ್ಟಿದ್ದಲ್ಲದೇ, ರಕ್ತ ಬಿದ್ದಿರುವ ಸ್ಥಳವನ್ನು ತೋರಿಸಿಕೊಟ್ಟಿದ್ದು, ನಂತರ ಪೋಲೀಸರು ಸದರಿ ಕಟ್ಟಿಗೆ ಮತ್ತು ಕಬ್ಬಿಣದ ರಾಡನ್ನು ಹಾಗೂ ರಕ್ತ ಬಿದ್ದಿರುವ ಸ್ಥಳದ ಮಣ್ಣನ್ನು ಮತ್ತು ಸಾದಾ ಮಣ್ಣನ್ನು ಪಡೆದುಕೊಂಡು ದಾಖಲೆ ತಯಾರಿಸಿ ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. ಅಲ್ಲದೇ ಸದರಿ ವಸ್ತುಗಳನ್ನು ಅರಗು ಸೀಲು ಮಾಡಿ ವಶಕ್ಕೆ ಪಡೆದಿರುತ್ತಾರೆ.

ಸದರಿ ಸ್ಥಳದಲ್ಲಿ ಬರೆಯಲಾದ ದಾಖಲೆಯನ್ನು ನಿ.ಪಿ.5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಒಂದು ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು. ನಿ.ಪಿ.6 ರಲ್ಲಿ ಸಾಕ್ಷಿಯು ತನ್ನನ್ನು ಹಾಗೂ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಅಲ್ಲದೇ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 3 ನ್ನು ನೋಡಿ ಗುರುತಿಸಿರುವುದಲ್ಲದೇ, ಮು.ಮಾ.2 ಮತ್ತು 4 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.2(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

ಅಲ್ಲದೇ ಸಾಕ್ಷಿಗೆ ಈ ಹಂತದಲ್ಲಿ ಎರಡು ಬಿಳಿಯ ಚೀಲಗಳನ್ನು ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ಅರಗು ಸೀಲು ತೆರೆದು ತೋರಿಸಲಾಗಿದ್ದು, ಅದರಲ್ಲಿ ಎರಡು ಪ್ಲಾಸ್ಟಿಕ್ ಡಬ್ಬಗಳು ಕಂಡುಬಂದಿದ್ದು, ಅವುಗಳಲ್ಲಿ ಒಂದರಲ್ಲಿ ಸಾದಾ ಮಣ್ಣು ಹಾಗೂ ಇನ್ನೊಂದರಲ್ಲಿ ರಕ್ತ ಮಿಶ್ರಿತ ಮಣ್ಣು ಇರುವುದು ಕಂಡುಬಂದಿದ್ದು, ಸದರಿ ಸಾದಾ

ಮಣ್ಣನ್ನು ಮು.ಮಾ.9 ಎಂದು, ಅದನ್ನು ಇಡಲಾದ ಡಬ್ಬವನ್ನು ಮು.ಮಾ.10 ಎಂದು ಹಾಗೂ ಮು.ಮಾ.10 ನ್ನು ಇಡಲಾದ ಚೀಲವನ್ನು ಮು.ಮಾ.11 ಎಂದು, ಅಲ್ಲದೇ ಸದರಿ ರಕ್ತ ಮಿಶ್ರಿತ ಮಣ್ಣನ್ನು ಮು.ಮಾ.12 ಎಂದು, ಅದನ್ನು ಇಡಲಾದ ಡಬ್ಬವನ್ನು ಮು.ಮಾ.13 ಎಂದು ಹಾಗೂ ಮು.ಮಾ.13 ನ್ನು ಇಡಲಾದ ಚೀಲವನ್ನು ಮು.ಮಾ.14 ಎಂದು ಗುರುತಿಸಲಾಯಿತು. ಮು.ಮಾ.11 ಮತ್ತು 14 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು.ಮಾ.11(ಎ) ಮತ್ತು 14(ಎ) ಎಂದು ಗುರುತಿಸಲಾಯಿತು. ಈ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಫ್ರಾ.ಸಾ.1 ರವರು ನಮ್ಮ ಊರಿನವರೇ ಆಗಿದ್ದು, ಆತನು ಬಹಳ ವರ್ಷಗಳಿಂದ ನನಗೆ ಪರಿಚಯ ಇರುತ್ತಾನೆ. ಈ ದಿನ ಫ್ರಾ.ಸಾ.1 ರವರು ಕೂಡ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ನಾನು ಪ್ರತಿದಿನ ಮಲೆಬೆನ್ನೂರಿನಲ್ಲಿ ಚಿಕನ್ ಅಂಗಡಿ ತೆರೆದು ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ನಿ.ಪಿ.4 ನೀಡಿದ ದಿನಾಂಕ ನನಗೆ ನೆನಪು ಇರುವುದಿಲ್ಲ. ಆ ಸಮಯದಲ್ಲಿ ನಿ.ಪಿ.4 ನ್ನು ಪೋಲೀಸರು ಮನೆಗೆ ಕಳುಹಿಸಿದ್ದರು. ಆದರೆ ಯಾವ ಪೋಲೀಸರು ಬಂದಿದ್ದರು ಎಂದು ನನಗೆ ಹೇಳಲು ಸಾಧ್ಯವಿರುವುದಿಲ್ಲ. ನಂತರ ನಾನು ಠಾಣೆಗೆ ಹೋಗಿ ನಿ.ಪಿ.4 ಕ್ಕೆ ಸಹಿ ಮಾಡಿರುತ್ತೇನೆ. ನೋಟೀಸು ನೀಡಿದ ಮರುದಿನ ಬೆಳಿಗ್ಗೆ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆಗ ಮದ್ಯಾಹ್ಣ 11-00 ಗಂಟೆಯಾಗಿತ್ತು. ಆ ಸಮಯದಲ್ಲಿ ಫ್ರಾ.ಸಾ.1 ಅಲ್ಲಿ ಇರಲಿಲ್ಲ. ನಾನು ಠಾಣೆಗೆ ಆ ದಿನ ಒಬ್ಬನೇ ಹೋಗಿರುತ್ತೇನೆ. ನಾನು ಠಾಣೆಗೆ ಹೋದ ಬಳಿಕ ಪೋಲೀಸರ ಬಳಿ ನನ್ನನ್ನು ಕರೆದ ಕುರಿತು ವಿಚಾರಿಸಿರುತ್ತೇನೆ. ನಾನು ನಿ.ಪಿ.4 ಕ್ಕೆ ಸಹಿ ಮಾಡುವಾಗ ಒಬ್ಬನೇ ಇದ್ದೆ.

ಆ ದಿನ ಸ್ಥಳಕ್ಕೆ ಪೋಲೀಸರ ಜೊತೆ ಜೀಪಿನಲ್ಲಿ ನಾನು ಹೋಗಿರುತ್ತೇನೆ. ಸದರಿ ಜೀಪಿನಲ್ಲಿ ನಾಲ್ಕು ಜನ ಪೋಲೀಸರು ಹಾಗೂ ತನಿಖಾಧಿಕಾರಿಯು ಇದ್ದರು. ದಿನಾಂಕ 13-07-2021 ಮಂಗಳವಾರ ಆಗುತ್ತದೆ ಎಂದರೆ ನನಗೆ ನೆನಪು ಇರುವುದಿಲ್ಲ. ಸದರಿ ಸ್ಥಳ ಶಾಲಾ ಆವರಣ ಆಗಿರುತ್ತದೆ ಎಂದರೆ ಸರಿ. ನಾವು ಅಲ್ಲಿಗೆ ಹೋದಾಗ ಸದರಿ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿದ್ದರು. ಆ ಸಮಯದಲ್ಲಿ ಪೋಲೀಸರು ಸದರಿ ಶಾಲೆಯ ಶಿಕ್ಷಕರು ಹಾಗೂ ಮಕ್ಕಳನ್ನು ಕರೆದು ವಿಚಾರಿಸಿದ್ದು ಇರುವುದಿಲ್ಲ. ಸದರಿ ಸ್ಥಳದ ಸುತ್ತ ಮುತ್ತಲು ಮೂರು ನಾಲ್ಕು ಶಾಲಾ ಕಾಲೇಜುಗಳು ಬರುತ್ತವೆ ಎಂದರೆ ಸರಿ. ಅಲ್ಲದೇ ಹಿಂದುಗಡೆ ಪುರಸಭೆ ಬರುತ್ತದೆ ಎಂದರೆ ಸರಿ. ಸದರಿ ಸ್ಥಳ ಆ ಕಾರಣದಿಂದ ಜನ ನಿಭಿಢವಾಗಿರುತ್ತದೆ ಎಂದರೆ ಹಗಲಿನಲ್ಲಿ ಇರುತ್ತಾರೆ ಎಂದು ನುಡಿದಿರುತ್ತಾರೆ. ನಾವು ಅಲ್ಲಿಗೆ ಹೋದಾಗ ಸದರಿ ಸ್ಥಳದಲ್ಲಿ ಸಾಕಷ್ಟು ಜನ ಓಡಾಡುತ್ತಿದ್ದರು ಎಂದರೆ ಸರಿ.

ಸದರಿ ಸ್ಥಳಕ್ಕೆ ಆ ದಿನ ನಾವು ಮದ್ಯಾಹ್ಣ 11-30 ನಂತರ ತಲುಪಿರುತ್ತೇವೆ. ಸದರಿ ಸ್ಥಳದಲ್ಲಿ ನಾವು ಒಂದು ತಾಸಿನ ಅವಧಿ ಇದ್ದೆವು. ನನಗೆ ಇಂಚು ಪ್ರಮಾಣದ ಕುರಿತು ಮಾಹಿತಿ ಇದೆ ಎಂದರೆ ಸರಿ. ಮು.ಮಾ.3 ಸುಮಾರು ಅರ್ಧ ಇಂಚು ಅಗಲ ಇದೆ ಎಂದರೆ ಸರಿ. ಅರ್ಧ ಇಂಚಿಗೂ ಒಂದು ಇಂಚಿಗೂ ಹಾಗೂ ಎರಡು ಇಂಚಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಮು.ಮಾ.1 ಒಂದೂವರೆಯಿಂದ ಎರಡು ಇಂಚು ದಪ್ಪ ಇದೆ ಎಂದರೆ ಸರಿ. ಆ ದಿನ ಪೋಲೀಸರು ಕಂಪ್ಯೂಟರ್ ಅನ್ನು ಸ್ಥಳಕ್ಕೆ ತೆಗೆದುಕೊಂಡು ಹೋದದ್ದು ಇರುವುದಿಲ್ಲ. ಮು.ಮಾ.2, 4, 11 ಮತ್ತು

14 ರ ಮೇಲೆ ಅಂಟಿಸಲಾದ ಚೀಟಿಯನ್ನು ಗಣಕೀಕೃತ ಮಾಡಲಾಗಿದ್ದು, ಅದಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿ.ಪಿ.5 ದಾಖಲೆಯನ್ನು ಯಾರು ಬರೆಯುತ್ತಿದ್ದರು ಎಂದು ಹಾಗೂ ಅದಕ್ಕೆ ಯಾರು ಬರೆಯಲು ಹೇಳುತ್ತಿದ್ದರು ಎಂದು ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ನಿ.ಪಿ.4 ಮತ್ತು 5 ಕ್ಕೆ ಪೋಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ಸಹಿ ಮಾಡಿದ್ದೇನೆ ಎಂದರೆ ಸರಿ. ಫ್ರಾ.ಸಾ.1 ನನಗೆ ಆತ್ಮೀಯ ಸ್ನೇಹಿತ ಎಂದರೆ ಸರಿಯಲ್ಲ. ಆತ ನನ್ನ ಅಂಗಡಿಯನ್ನು ನಡೆಸಲು ನನಗೆ ಸಾಕಷ್ಟು ಹಣ ಸಹಾಯ ಮಾಡಿದ್ದ ಎಂದರೆ ಸರಿಯಲ್ಲ. ಆತನ ಬಡ್ಡಿ ವ್ಯವಹಾರದ ಕುರಿತು ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು ಆತನೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿಯಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ನಾನು ಫ್ರಾ.ಸಾ.1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೋಲೀಸರು ನನಗೆ ನೋಟೀಸನ್ನು ನೀಡಿದ ಬಳಿಕ ನಾನು ಠಾಣೆಗೆ ಹೋಗಿದ್ದು, ನಂತರ ಆರೋಪಿತರು ನಮ್ಮನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ಹಾಗೂ ಮುದ್ದೆಮಾಲುಗಳನ್ನು ತೋರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲೀಸರು ಆರೋಪಿತರು ತೋರಿಸಿದಂತೆ ಯಾವುದೇ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ., ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.12.31 16:49:00 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.